

# ಕೇರೆ ಹಾವು ಎಣೆ ಆಡಿತ್ತಾ...

ಹೆಣ್ಣಿಗಾಗಿ ಹೋರಾಟ ನಡೆಯುವುದು ಮನುಷ್ಯ ಪ್ರಪಂಚಕ್ಕೆ ಸೀಮಿತವಾದ ವಿದ್ಯಮಾನವಲ್ಲ. ಗಂಡು ಕೇರೆ ಹಾವುಗಳೂ ಹೆಣ್ಣಿನ ಒಲವಿಗಾಗಿ ಸೆಣಸುತ್ತವೆ. ತಮ್ಮ ವ್ಯಾಪ್ತಿಯನ್ನು ಗೊತ್ತುಪಡಿಸಿಕೊಳ್ಳಲು ನಡೆಯುವ ಅವುಗಳ ಹೋರಾಟ ರೋಚಕವಾದುದು.

■ ಚಿತ್ರಲೇಖನ: **ಸೌಮ್ಯ ಅಭಿನಂದನ, ಬೀಳೂರು**



ನಾನು ಕೊಡಚಾದ್ರಿ ತಪ್ಪಲಿನ ಪಶ್ಚಿಮಘಟ್ಟದ ಹೃದಯಭಾಗದಲ್ಲಿರುವ ಬೀಳೂರಿನಲ್ಲಿ ವಾಸವಾಗಿರುವ ಹವ್ಯಾಸಿ ಛಾಯಾಗ್ರಾಹಕಿ. ಮೂಲತಃ ಕೃಷಿಕರ ಕುಟುಂಬದಿಂದ ಬೆಳೆದು ಬಂದವಳಾದ್ದರಿಂದ ಪ್ರಾಣಿ, ಪಕ್ಷಿ ಹಾಗೂ ಪರಿಸರದ ಬಗೆಗೆ ಬಹಳ ಆಸಕ್ತಿ. ಪ್ರತಿದಿನ ಕ್ಯಾಮೆರಾ ಹಿಡಿದು ನಮ್ಮ ಮನೆಯ ಅಡಿಕೆ ತೋಟದಲ್ಲಿ ಒಂದು ಸುತ್ತು ಹಾಕಿ, ಏನಾದರೂ ಅದ್ಭುತವಾದ ದೃಶ್ಯ ಸಿಕ್ಕರೆ ಸೆರೆಹಿಡಿಯುವುದು ರೂಢಿ.

ಒಂದು ದಿನ ತೋಟದಲ್ಲಿ ಸುತ್ತುವಾಗ ನಾನು ಅದುವರೆಗೆ ನೋಡಿರದ ಒಂದು ಅದ್ಭುತ ದೃಶ್ಯ ಕಣ್ಣಿಗೆ ಬಿತ್ತು. ಅಲ್ಲಿ ಎರಡು ಕೇರೆ ಹಾವುಗಳು ತಮ್ಮ ವಲಯ ನಿರ್ಧಾರಕ್ಕಾಗಿ ನೃತ್ಯದಲ್ಲಿ ಮಗ್ನವಾಗಿದ್ದವು.

ಕೇರೆ ಹಾವು (**Indian Rat Snake**) ವೇಗವಾಗಿ ಚಲಿಸುವ ಸರೀಸೃಪ. ಅದನ್ನು ವೈಜ್ಞಾನಿಕವಾಗಿ **Ptyas mucosa** ಎಂದು ಕರೆಯುತ್ತಾರೆ. ಅದು **Colubridae** ಗುಂಪಿಗೆ ಸೇರಿದೆ. ಅವುಗಳನ್ನು ಹೆಚ್ಚಾಗಿ ದಕ್ಷಿಣ ಏಷ್ಯಾ ಭಾಗಗಳಲ್ಲಿ ಕಾಣಬಹುದು. ಅದರ ದೇಹವು ಸುಮಾರು 2.5 ಮೀ.ನಷ್ಟು (ಎಂಟು ಅಡಿಯನಷ್ಟು) ಉದ್ದವಾಗಿರುತ್ತದೆ. ವಿಷಕಾರಿಯಲ್ಲದ ಕೇರೆಹಾವು ಸ್ವಭಾವತಃ ಆಕ್ರಮಣಕಾರಿಯಲ್ಲ. ಆದರೆ ಬೇರೆ ಜೀವಿಗಳಿಂದ ತೊಂದರೆಯಾದರೆ ಹೆಡೆಯನ್ನು ಎತ್ತಿ ಕಾಳಿಂಗ ಸರ್ಪ ಮತ್ತು ನಾಗರ ಹಾವಿನಂತೆ ಅನುಕರಣೆ ಮಾಡಿ ತನ್ನನ್ನು ತಾನು ರಕ್ಷಿಸಿಕೊಳ್ಳುತ್ತದೆ. ಈ ವರ್ತನೆಯು ಸಾಮಾನ್ಯ ಜನರಲ್ಲಿ ಕೇರೆಯು ವಿಷಕಾರಿ ಹಾವೆಂಬ ಗೊಂದಲವನ್ನು ಸೃಷ್ಟಿಸುತ್ತದೆ.

ಕೇರೆ ಹಾವುಗಳು ತಮ್ಮ ಸೀಳು ನಾಲಿಗೆಯ ಮೂಲಕ ವಾತಾವರಣದಲ್ಲಿನ ರಾಸಾಯನಿಕಗಳನ್ನು ಗ್ರಹಿಸುತ್ತವೆ. ಈ ಗ್ರಹಿಕೆಯಲ್ಲಿ ಮುಖ್ಯ



